AUGUST 07, 2025

# AKASHAVANI - DHARWAD

# PRADESH SAMACHARA (KANNADA) 12.00 P.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**1.** ಇನ್ಫೋಸಿಸ್ ಸಂಸ್ಥೆಯ, ಹುಬ್ಬಳ್ಳಿ ಅಭಿವೃದ್ಧಿ ಘಟಕದ ಉದ್ಘಾಟನೆ, ಉತ್ತರ ಕರ್ನಾಟಕ ಭಾಗದ, ಮಾಹಿತಿ ತಂತ್ರಜ್ಞಾನ ಕ್ಷೇತ್ರದ, ಭವಿಷ್ಯದ ಪಯಣದಲ್ಲಿ, ಪ್ರಮುಖ ಮೈಲುಗಲ್ಲು ಎಂದು, ಕೈಗಾರಿಕೆ ಖಾತೆ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ. ಇನ್ಫೋಸಿಸ್ ನ, ಹುಬ್ಬಳ್ಳಿ ಕ್ಯಾಂಪಸ್‌ನಲ್ಲಿ, ಸುಧಾರಿತ ಕೃತಕ ಬುದ್ಧಿಮತ್ತೆ, ಸೈಬರ್ ಭದ್ರತೆ ಮತ್ತು ಬಾಹ್ಯಾಕಾಶ ತಂತ್ರಜ್ಞಾನ ಕೇಂದ್ರವನ್ನು ಉದ್ಘಾಟಿಸಲು, ತಮಗೆ ಸಂತಸವಾಯಿತು ಎಂದು, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ. ಕೆಲವೇ ವ ರ್ಷಗಳ ಹಿಂದೆ, ಇನ್ನೂರು ಉದ್ಯೋಗಿಗಳಿದ್ದ, ಹುಬ್ಬಳ್ಳಿ ಕ್ಯಾಂಪಸ್ ನಲ್ಲಿ, ಇಂದು ಸಾವಿರಕ್ಕೂ ಹೆಚ್ಚು ತಂತ್ರಜ್ಞರನ್ನು ಹೊಂದುವ ಮಟ್ಟಕ್ಕೆ, ವಿಸ್ತಾರಗೊಂಡಿರುವುದು ಶ್ಲಾಘನೀಯ ಎಂದಿದ್ದಾರೆ. ಇನ್ಫೋಸಿಸ್ ಸಂಸ್ಥಾಪಕರಾದ, ನಾರಾಯಣ ಮೂರ್ತಿ ಮತ್ತು ಸುಧಾ ಮೂರ್ತಿಯವರು ಉತ್ತರ ಕರ್ನಾಟಕದವರಾಗಿದ್ದು, ಈ ಭಾಗದ ಯುವ ಪ್ರತಿಭೆಗಳಿಗೆ, ಉದ್ಯೋಗಾವಕಾಶಗಳನ್ನು ಒದಗಿಸಿರುವುದು, ಹೆಮ್ಮೆಯ ಸಂಗತಿ ಎಂದು, ಶ್ಲಾಘಿಸಿದ್ದಾರೆ.

<><><>

**2.** ಇನ್ಫೋಸಿಸ್ ನ, ಹುಬ್ಬಳ್ಳಿ ಕ್ಯಾಂಪಸ್‌ನಲ್ಲಿ, ಸುಧಾರಿತ ಕೃತಕ ಬುದ್ಧಿಮತ್ತೆ, ಸೈಬರ್ ಭದ್ರತೆ ಮತ್ತು ಬಾಹ್ಯಾಕಾಶ ತಂತ್ರಜ್ಞಾನ ಕೇಂದ್ರ, ಉತ್ತರ ಕರ್ನಾಟಕದ ಯುವ ಪ್ರತಿಭೆಗಳಿಗೆ ಅವಕಾಶ ಮತ್ತು ಸಾಧನೆಗೆ ವೇದಿಕೆ ಒದಗಿಸಲಿದೆ ಎಂದು, ಕೇಂದ್ರ ನವ ಹಾಗೂ ನವೀಕರಿಸಬಹುದಾದ, ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ಎಕ್ಸ್ ಮಾಧ್ಯಮದಲ್ಲಿ ಹರ್ಷ ವ್ಯಕ್ತ ಪಡಿಸಿದ್ದಾರೆ.

<><><>

**3.** ಕೇಂದ್ರ ಪುರಸ್ಕೃತ ಆರ್ಥಿಕ ಹಾಗೂ ಸಾಮಾಜಿಕ ಭದ್ರತಾ ಯೋಜನೆಗಳ ಕುರಿತು, ಜನಸಾಮಾನ್ಯರಿಗೆ ತಿಳಿವಳಿಕೆ ಮೂಡಿಸುವ, ಜನಜಾಗೃತಿ ಕಾರ್ಯಕ್ರಮ, ರಾಜ್ಯದ 31 ಜಿಲ್ಲೆಗಳಲ್ಲಿ, ಸೆಪ್ಟೆಂಬರ್ 30ರ ವರೆಗೆ ಮುಂದುವರಿಯಲಿದೆ.

<><><>

ಕೇಂದ್ರ ಹಣಕಾಸು ಸೇವೆಗಳ ಇಲಾಖೆ ಆಯೋಜಿಸಿರುವ, ಹಣಕಾಸು ಸೇರ್ಪಡೆ ಪರಿಪೂರ್ಣತೆ ಅಭಿಯಾನದ ಅಂಗವಾಗಿ, ಎಲ್ಲೆಡೆ ಜನಸುರಕ್ಷಾ ಯೋಜನೆಗಳ ಶಿಬಿರ ನಡೆಯುತ್ತಿದ್ದು, ಆರ್ಥಿಕ ಸುರಕ್ಷತೆಗಾಗಿ ಸಾರ್ವಜನಿಕರು, ತಮ್ಮ ಹೆಸರು ನೋಂದಾಯಿಸಲು, ಕೋರಲಾಗಿದೆ.

<><><>

ಹಾವೇರಿ ತಾಲೂಕು, ಕಬ್ಬೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಜರುಗಿದ, ಜನ ಜಾಗೃತಿ ಕಾರ್ಯಕ್ರಮದಲ್ಲಿ, ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ಪ್ರಬಂಧಕ ಪ್ರಭುದೇವ, ಪ್ರಧಾನಮಂತ್ರಿ ಸುರಕ್ಷಾ ವಿಮೆ, ಪ್ರಧಾನಮಂತ್ರಿ ಜೀವನಜ್ಯೋತಿ ವಿಮೆ ಹಾಗೂ ಅಟಲ್ ಪಿಂಚಣಿ ಯೋಜನೆಯಡಿ, ರೈತರು ಹೆಸರು ನೋಂದಾಯಿಸುವಂತೆ ಕೋರಿದರು.

<><><>

ಪ್ರಬಂಧಕ ಪ್ರಭುದೇವ ಧ್ವನಿ 35 ಸೆಕೆಂದುಗಳು

<><><>

4. ಕಲಬುರಗಿ ಜಿಲ್ಲೆ, ಮುಂಗಾರು ಹಂಗಾಮಿನ ಬೆಳೆ ವಿಮೆ ನೋಂದಣಿಯಲ್ಲಿ, ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದೆ. ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಬೆಳೆ ವಿಮೆ ಯೋಜನೆಯಡಿ, ಕಲಬುರಗಿ ಜಿಲ್ಲೆಯ 2 ಲಕ್ಷದ 93 ಸಾವಿರ ರೈತರು ನೋಂದಣಿ ಮಾಡಿಸಿದ್ದಾಗಿ, ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ.

<><><>

5. ವೀರರಾಣಿ ಕಿತ್ತೂರು ಚನ್ನಮ್ಮ ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಶೌರ್ಯಗಾಥೆ ಬಿಂಬಿಸುವ, 79ನೇ ಸ್ವಾತಂತ್ರ್ಯೋತ್ಸವ ಫಲಪು ್ಪ ಪ್ರದರ್ಶನ, ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಇಂದಿನಿಂದ, 18ನೇ ತಾರೀಖಿನ ವರೆಗೆ, ಆಯೋಜಿತವಾಗಿದೆ. ಬೆಳಗಾವಿ ಜಿಲ್ಲೆ, ಕಿತ್ತೂರಿನ ಐತಿಹಾಸಿಕ ಕೋಟೆ, ಹೂವುಗಳಲ್ಲಿ ಅನಾವರಣಗೊಳ್ಳಲಿದೆ. ಈ ಬಾರಿಯ ಫಲಪು ್ಪ ಪ್ರದರ್ಶನಕ್ಕೆ, 10 ಲಕ್ಷಕ್ಕೂ ಹೆಚ್ಚು ಜನ ಭೇಟಿ ನೀಡುವ ನಿರೀಕ್ಷೆ ಇದೆ.

<><><>

6. 1905ರ ಸ್ವದೇಶಿ ಚಳವಳಿಯ ಸ್ಮರಣಾರ್ಥ, ಇಂದು, 'ರಾಷ್ಟ್ರೀಯ ಕೈ ಮಗ್ಗ ದಿನ' ಆಚರಿಸಲಾಗುತ್ತಿದೆ.ಕೈ ಮಗ್ಗದ ಅಗಾಧ ಪರಂಪರೆ, ನಿಖರ ಕೌಶಲ, ಪರಿಸರ ಸ್ನೇಹಿ ಉತ್ಪಾದನೆ ತನ್ನೊಳಗೆ ನೇಯ್ದುಕೊಂಡಿರುವ, ಭಾರತೀಯ ಕೈಮಗ್ಗ ವಸ್ತ್ರಗಳು, ನಮ್ಮ ಘನತೆ ಮತ್ತು ಸಂಸ್ಕೃತಿಯ ಪ್ರತೀಕ. 'ಕೈ ಮಗ್ಗದ ಉಡುಪುಗಳನ್ನು ಕೊಂಡು, ನೇಕಾರರ ಜೀವನಕ್ಕೆ ಆಸರೆಯಾಗೋಣ. ಸ್ವದೇಶಿ ಚಳವಳಿಯಲ್ಲಿ ಪ್ರಮುಖ ಪಾತ್ರವಹಿಸಿದ್ದ, ಬಾಲಗಂಗಾಧರ ತಿಲಕ, ಬಾಪೂಜಿ, ಲಾಲಾ ಲಜಪತ್ ರಾಯ ಮೊದಲಾದ ಮಹನೀಯರ ಸೇವೆಯನ್ನು ಸ್ಮರಿಸೋಣ' ಎಂದು, ಕೈಗಾರಿಕೆ ಖಾತೆ ಸಚಿವ ಎಂ.ಬಿ. ಪಾಟೀಲ. ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ.

<><><>

7. ಕೈಮಗ್ಗ ಪುರಾತನ ಕಸುಬುಗಳಲ್ಲಿ ಒಂದು. ಕೈಮಗ್ಗ ಉದ್ಯಮ ಮತ್ತು ನೇಕಾರಿಕೆಯಲ್ಲಿ ತೊಡಗಿರುವವರಿಗೆ, ತಮ್ಮ ಸರ್ಕಾರ, ಹಲವಾರು ಸೌಲಭ್ಯಗಳನ್ನು ಒದಗಿಸುತ್ತಿದೆ ಎಂದು, ಕಾರ್ಮಿಕ ಖಾತೆ ಸಚಿವ, ಸಂತೋಷ ಲಾಡ ತಿಳಿಸಿದ್ದಾರೆ. ಕೈಮಗ್ಗದ ಉತ್ಪನ್ನಗಳನ್ನು ಹೆಚ್ಚು ಹೆಚ್ಚು ಬಳಸಿ, ನೇಕಾರಿಕೆಯನ್ನು ಪ್ರೋತ್ಸಾಹಿಸೋಣ. ಕೈಮಗ್ಗದ ಬಟ್ಟೆಗಳ ಮಹತ್ವವನ್ನು ಇತರರಿಗೂ ತಿಳಿಸೋಣ ಎಂದು, ಅವರು ಆಶಯ ವ್ಯಕ್ತ ಪಡಿಸಿದ್ದಾರೆ.

<><><>

8. ಏರೋಸ್ಪೇಸ್ ಕಾರಿಡಾರ್, ಚಿಕ್ಕಬಳ್ಳಾಪುರಕ್ಕೆ ಒಂದು, ಹುಬ್ಬಳ್ಳಿ–ಧಾರವಾಡ, ಬೆಳಗಾವಿ ಅಥವಾ ವಿಜಯಪುರಕ್ಕೆ ಮತ್ತೊಂದು ಸ್ಥಾಪಿಸಲು, ರಕ್ಷಣಾ ಖಾತೆ ಸಚಿವ ರಾಜನಾಥ್ ಸಿಂಗ್ ಅವರನ್ನು ಭೇಟಿ ಮಾಡಿ, ಮನವಿ ಮಾಡಿದ್ದಾಗಿ, ಕೈಗಾರಿಕೆ ಖಾತೆ ಸಚಿವ ಎಂ.ಬಿ. ಪಾಟೀಲ, ಹುಬ್ಬಳ್ಳಿ ವಿಮಾನ ನಿಲ್ದಾಣದಲ್ಲಿ, ತಿಳಿಸಿದ್ದಾರೆ. 10ನೇ ತಾರೀಖು, ಬೆಂಗಳೂರು–ಬೆಳಗಾವಿ ವಂದೇ ಭಾರತ ರೈಲು ಸೇರಿದಂತೆ, ಬೆಂಗಳೂರಿನ ಯೆಲ್ಲೋ ಮೆಟ್ರೋ ಉದ್ಘಾಟಿಸಲು, ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಆಗಮಿಸುತ್ತಿದ್ದಾರೆ. ರಾಜ್ಯ ಸರ್ಕಾರ ಅವರನ್ನು ಸ್ವಾಗತಿಸುತ್ತದೆ. ರೇಲ್ವೆ ಯೋಜನೆಗಳ ಅಭಿವೃದ್ಧಿಯಲ್ಲಿ, ರಾಜ್ಯದ ಪಾಲೂ ಇದೆ, ಎಂದರು.

<><><>

9. ಕಾರವಾರ ಜಿಲ್ಲೆಯ, ಕೈಗಾದಲ್ಲಿ ಅಣು ವಿದ್ಯುತ್ ಸ್ಥಾವರದಿಂದ, ವಿಕಿರಣ ಹರಡುವುದನ್ನು ತಡೆಯಲು, ಗರಿ ್ಠ ಪ್ರಮಾಣದ ಸುರಕ್ಷತಾ ವ್ಯವಸ್ಥೆ ಇದೆ; ಯಾವುದೇ ವ್ಯತಿರಿಕ್ತ ಪರಿಣಾಮ, ಇದು ವರೆಗೂ ಕಂಡುಬಂದಿಲ್ಲ ಎಂದು, ಕೈಗಾ

**ಘಟಕದ ನಿರ್ದೇಶಕ ಬಿ.ವಿನೋದಕುಮಾರ ಸ್ಪಷ್ಟ ಪಡಿಸಿದ್ದಾರೆ.  ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಕಿರಣದ ಪ್ರಭಾವ ನಿಗದಿತ ಪ್ರಮಾಣಕ್ಕಿಂತ ಅತ್ಯಂತ ಕನಿಷ್ಟ ಮಟ್ಟದಲ್ಲಿದೆ. ಸಾರ್ವಜನಿಕರು ಊಹಾಪೋಹಗಳಿಗೆ ಕಿವಿಗೊಡಬಾರದು ಎಂದು, ಮನವಿ ಮಾಡಿದ್ದಾರೆ.**

<><><>

**10. ರಾಜ್ಯಾದ್ಯಂತ ಜೋರಾದ ಗಾಳಿಯೊಂದಿಗೆ, ಇಂದು ಮತ್ತು ನಾಳೆ ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಲ್ಲಿ, ಚದುರಿದಂತೆ, ವ್ಯಾಪಕವಾಗಿ ಸಾಧಾರಣ ಮಳೆ; ಅಲ್ಲಲ್ಲಿ ಭಾರಿ ಹಾಗೂ ಅತಿ ರಭಸದ ಮಳೆ ಸಾಧ್ಯತೆ ಇದೆ. ಒಳನಾಡು ಜಿಲ್ಲೆಗಳಲ್ಲಿ, ಚದುರಿದಂತೆ ವ್ಯಾಪಕವಾಗಿ, ಹಗುರ ಸಾಧಾರಣ ಮಳೆ ಹಾಗೂ ಅಲ್ಲಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು, ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ಮುನ್ಸೂಚನೆ ನೀಡಿದೆ.**

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**